ಸಂಪೂರ್ಣ ಲೌಕಿಕ ವಸ್ತುವನ್ನು ಸ್ವೀಕರಿಸಿದ್ದಾನೆ. ವಿಷಯದ ಆಯ್ಕೆ ಮತ್ತು ಧೋರಣೆಯಲ್ಲಿ ಅಂದಿನ ಕವಿಗಳಿಗಿಂತ ಬೇರೆ. ಕರ್ಣಾಟಕ ಕಾದಂಬರಿ ಜನ್ಮಾಂತರದ ಕತೆಯಾದರೂ, ಜೈನಧರ್ಮದಲ್ಲಿ ಕಾಣಬರುವ ಭವಾವಳಿಯ ಪರಿಕಲ್ಪನೆ; ಧಾರ್ಮಿಕ ಅರ್ಥ ಅದರಲಿಲ್ಲ. ಕವಿಯ ದೃಷ್ಟಿಯಲ್ಲಿ ಅದೊಂದು ನಂಬಿಕೆ; ಸ್ನೇಹ ಸಂಬಂಧಗಳ ಬೆಸುಗೆಯಷ್ಟೆ. ನಾಗವರ್ಮ ಬಾಣನ ಪದ್ಯಗಂಧಿ ಗದ್ಯಕಥನದ ಅರ್ಥವಲಯಗಳನ್ನೆಲ್ಲಾ ಪ್ರೌಢ ಚಂಪೂಕಾವ್ಯ ಪರಿಧಿಯಲ್ಲಿ ಅಳವಡಿಸಿದ್ದಾನೆ. ಮೂಲ ಕೃತಿಯ ಕತೆ, ಪಾತ್ರ, ಆಶಯ, ಶೈಲಿ–ಇವುಗಳಿಗೆ ಸ್ವಲ್ಪವೂ ಧಕ್ಕೆಯಾಗದ ಹಾಗೆ ಮಾರ್ಪಡಿಸಿದ್ದಾನೆ. ಅಲ್ಲಿ ಸ್ವತಂತ್ರ ಕೃತಿ ಎನ್ನುವಷ್ಟು ಸಹಜತೆಯಿದೆ. ಹೀಗಾಗಿ, ಅದು ಕನ್ನಡದ ಒಂದು ಮಹತ್ತ್ವದ ಪರಿವರ್ತನ ಕಾವ್ಯ; ಬಿ.ಎಂ.ಶ್ರೀ ಹೇಳುವಂತೆ 'ಕನ್ನಡದ ಮೊದಲನೆಯ ಪ್ರಣಯ ಕಾವ್ಯ'. ಜೈನ ಕಾವ್ಯದ ಪಾತ್ರಗಳು ಜಾತಿ ಸ್ಮರಣೆಯಿಂದ ವೈರಾಗ್ಯವನ್ನು ಪಡೆಯುತ್ತವೆ. ಆದರೆ, ಪುಂಡರೀಕ ಮಹಾಶ್ವೇತೆಯ ಬಗ್ಗೆ ಪೂರ್ವ ಜನ್ಮಕ್ಕಿಂತ ಅತ್ಯಧಿಕವಾದ ಅನುರಾಗವನ್ನು ಪ್ರಕಟಿಸುತ್ತಾನೆ. ಗಿಳಿಯ ರೂಪದಲ್ಲಿರುವ ಪುಂಡರೀಕನ ಮಾತುಗಳಿವು:

ಜಾತಿ ಸ್ಮರತೆ ವಿರಕ್ತಿಗೆ।ಹೇತುವೆನುತ್ತಿರ್ಪರದುವೆ ಪುಸಿಯಾಗಿ ಮಹಾ
ಶ್ವೇತೆಯೊಳಾದೊಂದನುರಾ।ಗಾತಿಶಯಂ ಪೆರ್ಚಿದಪುದು ಮುನ್ನಿಂದೀಗಳ್

ಕಥನದ ವಿಸ್ತೃತ ಸಾಧ್ಯತೆಗಳನ್ನೆಲ್ಲಾ ಸಮರ್ಥವಾಗಿ ದುಡಿಸಿಕೊಂಡಿರುವ ನಾಗವರ್ಮ, ಕಾವ್ಯ ಸತ್ತ್ವವನ್ನು ಬಲಪಡಿಸಬಹುದಾದ ಭಾಷೆ, ರಸ, ಧ್ವನಿ, ಅಲಂಕಾರ–ಮೊದಲಾದ ಪರಿಕರಗಳನ್ನು ಯಥೋಚಿತವಾಗಿ ಬಳಸಿದ್ದಾನೆ. ಅಲ್ಲಿ ಹೆಚ್ಚು ಅಭಿವ್ಯಕ್ತಿ ನಿರ್ಬಂಧಗಳು ಇಲ್ಲದಿರುವುದರಿಂದ ಭಾಷಾ ಜಡತೆ ಕಾಣಬರುವುದಿಲ್ಲ. ಮೂಲ ಕತೆಯಲ್ಲಿರುವ ಅನಗತ್ಯ ಭಾಗಗಳನ್ನು ಬಿಟ್ಟು, ಕೆಲವು ಕಡೆ ಅತ್ಯಂತ ಸೊಗಸಾದ ಪರಿವರ್ತನೆಗಳನ್ನು ಮಾಡಿದ್ದಾನೆ. ದಟ್ಟವಾದ ವರ್ಣನೆಯ ಭಾಗಗಳು, ವೈವಿಧ್ಯಪೂರ್ಣ ಸನ್ನಿವೇಶ ನಿರ್ಮಾಣ, ಸರಳವಾದ ಹಳಗನ್ನಡ ಪದಸಂಪತ್ತು ಒಗ್ಗೂಡಿದೆ. ಸಂಸ್ಕೃತದ ಒಂದು ಮಹತ್ತ್ವದ ಗ್ರಂಥವನ್ನು ಕನ್ನಡಕ್ಕೆ ತರಬೇಕೆಂಬ ಉತ್ಕಟ ಹಂಬಲದ ಹಿಂದೆ ಅಪೂರ್ವವಾದ ಕಾವ್ಯ ಶ್ರದ್ಧೆ ಕಾಣಬರುತ್ತದೆ. ಆದರೆ, ಕಥನ ನಿರ್ವಹಣೆ ಅಷ್ಟು ಸುಲಭವಾಗಿಲ್ಲ; ಏಕೆಂದರೆ ಅದು ಜನ್ಮಾಂತರಗಳ ಸರಗತೆ.

'ಕರ್ಣಾಟಕ ಕಾದಂಬರಿ' ಮಹಾಶ್ವೇತೆ –ಪುಂಡರೀಕ, ಕಾದಂಬರಿ–ಚಂದ್ರಾಪೀಡರ ಪ್ರಣಯ ಕತೆ; ಅದು ಕೇವಲ ರೋಚಕ ನಿರೂಪಣೆಯಲ್ಲ, ಒಂದು ವಿಪ್ರಲಂಬ (ಅಗಲಿಕೆ/ವಿರಹ) ಶೃಂಗಾರ ಕಾವ್ಯ. ಮಹಾಶ್ವೇತೆ ಅಪ್ಸರೆ; ಕಾದಂಬರಿ ಗಂಧರ್ವ ಕನ್ಯೆ. ಮಾನವರೆನಿಸಿರುವ ಪುಂಡರೀಕ, ಚಂದ್ರಾಪೀಡ ಅವರಲ್ಲಿ ಅನುರಕ್ತರಾಗುತ್ತಾರೆ. ಪುಂಡರೀಕ ಮಹಾಶ್ವೇತೆಯನ್ನು ಕಂಡು, ಕಾಮೋದ್ವೇಗಕ್ಕೆ ಒಳಗಾಗಿ, ಅದಕ್ಕೆ ಚಂದ್ರನೇ ಕಾರಣನೆಂದು ಅವನಿಗೆ ಶಾಪನೀಡಿ ಸಾಯುತ್ತಾನೆ. ಮರುಜನ್ಮದಲ್ಲಿ ವೈಶಂಪಾಯನನಾಗಿ ಜನಿಸಿ, ಮತ್ತೆ ಮಹಾಶ್ವೇತೆಯ ಜೊತೆ ಅವಿನಯದಿಂದ ವರ್ತಿಸಿ, ಅವಳು ನೀಡಿದ ಶಾಪದಿಂದ ಗಿಳಿಯಾಗಿ ಹುಟ್ಟುತ್ತಾನೆ (ಪುಂಡರೀಕ>ವೈಶಂಪಾಯನ>ಗಿಳಿ). ಚಂದ್ರನೆಂಬುವನು ಚಂದ್ರಾಪೀಡನಾಗಿ, ಬಳಿಕ ಶೂದ್ರಕ ರಾಜನಾಗಿ ಜನ್ಮವೆತ್ತುತ್ತಾನೆ (ಚಂದ್ರ>ಚಂದ್ರಾಪೀಡ>ಶೂದ್ರಕ). ಎರಡನೆಯ ಜನ್ಮದಲ್ಲಿ ಚಂದ್ರಾಪೀಡ–ವೈಶಂಪಾಯನ ಗೆಳೆಯರಾಗಿಯೂ, ಪುಂಡರೀಕನ ಗೆಳೆಯ ಕಪಿಂಜಲ ಇಂದ್ರಾಯುಧವೆಂಬ ಕುದುರೆಯಾಗಿ ಹುಟ್ಟುವರು. ಚಂದ್ರ–ಪುಂಡರೀಕ ಎರಡು ಜನ್ಮ ಪಡೆದರೂ ಕಾದಂಬರಿ–ಮಹಾಶ್ವೇತೆ ಇದ್ದಂತೆಯೇ ಇರುತ್ತಾರೆ; ಇದು ಕಥನ ವಿಶೇಷ. ಪ್ರೇಮದ ಅಮರತ್ವವನ್ನು ಕಾಯ್ದುಕೊಳ್ಳುವ ಸಂಕಲ್ಪಶಕ್ತಿ ಅವರದ್ದು. ಮೋಹಪರವಶತೆ, ಶಾಪವಿಮೋಚನೆ,